ಅದೂ ಅಲ್ಲದೆ ನೀವು ಕೇವಲ ನನ್ನೊಬ್ಬಳ ಪ್ರಭುವಲ್ಲ. ನೀವು ಎಲ್ಲರ ಪ್ರಭುವಾಗಿದ್ದೀರಿ. ಇಂದು ತುಂಬಾ ಹೊತ್ತಾಗಿದೆ. ಆದ್ದರಿಂದ, ದಯವಿಟ್ಟು ಊಟಮಾಡಿ" ಎಂದರು. ಈ ಮಾತನ್ನು ಕೇಳಿ, ಮಾತೆಯವರ ಹೃದಯ ವೈಶಾಲ್ಯತೆಯ ಪರಿಚಯವನ್ನು ಪಡೆದ ಶ್ರೀರಾಮಕೃಷ್ಣರು ಮರುಮಾತನಾಡದೇ ಆ ಊಟವನ್ನೇ ಸ್ವೀಕರಿಸಿದರು. ಇನ್ನೊಮ್ಮೆ ಶ್ರೀರಾಮಕೃಷ್ಣರು ತಮ್ಮ ತರುಣ ಶಿಷ್ಯರಿಗೆ, ರಾತ್ರಿ ಊಟದ ಸಮಯದಲ್ಲಿ ಹೆಚ್ಚು ತಿನ್ನಿಸುವುದರಿಂದ, ಅವರ ಆಧ್ಯಾತ್ಮಿಕ ಸಾಧನೆಗೆ ಅದು ಅಡ್ಡಿಯಾಗುವುದೆಂದು ಆಕ್ಷೇಪಣೆ ಎತ್ತಿದರು. ಆಗ ಮಾತೆಯವರು ಅವರ ಸಾಧನೆಯ ಜವಾಬ್ದಾರಿಯನ್ನು ತಾವು ವಹಿಸು ವುದಾಗಿಯೂ, ಮಕ್ಕಳಿಗೆ ಊಟ ಮಾಡಿಸುವ ವಿಷಯ ದಲ್ಲಿ ಹಸ್ತಕ್ಷೇಪ ಮಾಡಬಾರದೆಂದೂ ಹೇಳಿದರು. ಈ ಬಗೆಯಲ್ಲಿ ಶ್ರೀಮಾತೆಯವರ ಮಾತೃತ್ವದ ವಿಕಾಸ ವಾಗಿರುವುದನ್ನು ಕಂಡು ಶ್ರೀರಾಮಕೃಷ್ಣರು ಒಳಗೊಳಗೇ ಆನಂದಪಟ್ಟು ಸುಮ್ಮನಾದರು.

ಭಾರತದಲ್ಲಿ ಸತೀತ್ವದ ಆದರ್ಶಕ್ಕಿಂತಲೂ ಮಾತೃತ್ವದ ಆದರ್ಶವೇ ಶ್ರೇಷ್ಠವಾದದ್ದು. ಮಾತೃತ್ವವೆಂದರೆ ಬರೀ ಮಕ್ಕಳನ್ನು ಪಡೆಯುವುದಷ್ಟೇ ಅಲ್ಲ. ಈ ದೃಷ್ಟಿಯಲ್ಲಿ ನೋಡಿದರೆ ಶ್ರೀಮಾತೆಯವರಿಗೆ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಾರೂ ಇರಲಿಲ್ಲ. ಆದರೂ ಅವರು ಮಾತೃತ್ವದ ಪರಾಕಾಷ್ಠೆಯನ್ನು ತಲುಪಿದ್ದರು. ಸಂಪೂರ್ಣ ನಿಃಸ್ವಾರ್ಥ ಪ್ರೇಮ, ಅಪಾರ ಸ್ನೇಹ, ಕರುಣೆ, ತ್ಯಾಗ, ತಾಳ್ಮೆ, ಕ್ಷಮೆ, ಮಾಧುರ್ಯ, ಯಾರಲ್ಲೂ ದೋಷವನ್ನು ಕಾಣದಿರುವ ಸ್ವಭಾವ – ಈ ವಿಶೇಷ ಗುಣಗಳೆಲ್ಲಾ ಅವರ ಮಾತೃತ್ವದ ವೈಶಿಷ್ಟ್ಯಗಳಾಗಿದ್ದವು. ಅದೆಷ್ಟೋ ಜನರಿಗೆ ಶ್ರೀಮಾತೆ ಯವರನ್ನು ಮೊದಲಬಾರಿ ಕಂಡಾಗಲೇ ತನ್ನ ಸ್ವಂತ ತಾಯಿಯನ್ನು ಕಂಡಹಾಗೆ ಅನ್ನಿಸುತ್ತಿತ್ತು. ಇನ್ನೆಷ್ಟೋ ಜನರು ಶ್ರೀಮಾತೆಯವರಲ್ಲಿ ತಮ್ಮ ತಾಯಿಯ ಪ್ರತಿಮೂರ್ತಿಯನ್ನೇ ಕಾಣುತ್ತಿದ್ದರು. ಭಕ್ತಾಗ್ರೇಸರ ಶ್ರೀ ಗಿರೀಶ್‌ಚಂದ್ರ ಘೋಷ್ ಒಮ್ಮೆ ಶ್ರೀಮಾತೆಯವರನ್ನೇ ನೇರವಾಗಿ ಪ್ರಶ್ನಿಸಿದರು, "ನೀವು ನಮಗೆ ಯಾವ ವಿಧದಲ್ಲಿ ತಾಯಿ?" ಎಂದು. ತಕ್ಷಣ ಮಾತೆಯವರು, "ನಾನು ನಿನ್ನ ನಿಜವಾದ ತಾಯಿ. ಕೇವಲ ಗುರುಪತ್ನಿಯಲ್ಲ ಅಥವಾ ಮಾತಿನ ತಾಯಿಯೂ ಅಲ್ಲ, ಸ್ವೀಕರಿಸಿದ ತಾಯಿಯೂ ಅಲ್ಲ. ನಾನು ಸತ್ಯವಾಗಿಯೂ ನಿನ್ನ ಸ್ವಂತ ತಾಯಿಯೇ ಆಗಿದ್ದೇನೆ" ಎಂದರು. ನಿಜಕ್ಕೂ ಶ್ರೀಮಾತೆ ಯವರು ಎಲ್ಲರಿಗೂ ಸ್ವಂತ ತಾಯಿಯಾಗಿದ್ದರಿಂದಲೇ ಅವರ ಬಳಿಗೆ ಬರುತ್ತಿದ್ದ ಭಕ್ತರಿಗೆ, ಬಾಯಿಬಿಟ್ಟು ಹೇಳದೇ, ಯಾರಿಗೆ ಯಾವ ಆಹಾರ ಪ್ರಿಯವೋ ಅದನ್ನೇ ಅಡುಗೆ ಮಾಡಿ ಬಡಿಸುತ್ತಿದ್ದರು. ಮಾತೆಯವರ ಮಾತೃವಾತ್ಸಲ್ಯದಲ್ಲಿ ಮೇಲು–ಕೀಳು, ಪತಿತ–ಪಾವನ, ಪಂಡಿತ–ಪಾಮರ, ಸಜ್ಜನ–ದುರ್ಜನ, ಜಾತಿ–ವರ್ಣಗಳ ಯಾವ ತಾರತಮ್ಯವೂ ಇರಲಿಲ್ಲ. ಹಾಗೆಯೇ ಅವರ ಪ್ರೀತಿಯಲ್ಲಿ ಕೂಡ ದುರ್ಬಲತೆ, ಕುರುಡು ವ್ಯಾಮೋಹ, ವಿವೇಕರಾಹಿತ್ಯತೆ ಯಾವುದೂ ಇರಲಿಲ್ಲ. ಶ್ರೀಮಾತೆ ಯವರು ಪರಿಶುದ್ಧ ಪ್ರೀತಿ–ಮಮತೆಯ ಮೂರ್ತಿಯೇ ಆಗಿದ್ದರು.

ಇಷ್ಟೆಲ್ಲ ಇದ್ದರೂ ಮಾತಿನಲ್ಲಿ ವ್ಯಕ್ತಪಡಿಸಲಾಗದ ಗಾಂಭೀರ್ಯವೊಂದು ಅವರ ಮಾತೃತ್ವದಲ್ಲಿತ್ತು. ಆದ್ದರಿಂದಲೇ ಯಾರಿಗೂ ಅವರ ಮುಂದೆ ಮನ ಬಂದಂತೆ ಸಲುಗೆಯಿಂದ ವರ್ತಿಸಲು ಸಾಧ್ಯವಾಗು ತ್ತಿರಲಿಲ್ಲ. ಅದಕ್ಕೆ ಒಂದು ಉದಾಹರಣೆ: ಚಂದ್ರಮೋಹನ ದತ್ತ ಶ್ರೀಮಾತೆಯವರಿದ್ದ 'ಉದ್ಬೋಧನ' ಮನೆಯಲ್ಲೇ ಇದ್ದ ಒಬ್ಬ ಕೆಲಸದ ಹುಡುಗ. ಅವನು ಅತ್ಯಂತ ಸರಳ ಸ್ವಭಾವದವನು. ಚಿಕ್ಕವಯಸ್ಸಿನಲ್ಲೇ ಅಲ್ಲಿಗೆ ಬಂದಿದ್ದ ಅವನನ್ನು ಶ್ರೀಮಾತೆಯವರು ಬಹಳ ಪ್ರೀತಿಸುತ್ತಿದ್ದರು. ತಮ್ಮೆಲ್ಲಾ ಹೊರಗಿನ ಕೆಲಸಗಳನ್ನೂ ಅವನಿಂದಲೇ ಮಾಡಿಸಿಕೊಳ್ಳುತ್ತಿದ್ದರು. ಆತನ ಕುಟುಂಬದವರು ಬಹಳ ಕಷ್ಟದಲ್ಲಿದ್ದಾಗ ಶ್ರೀಮಾತೆಯವರು ತುಂಬಾ ಸಹಾಯ ಮಾಡಿದರು. ಆದ್ದರಿಂದ ಚಂದ್ರಮೋಹನನು ಯಾವುದೇ ವಿಷಯಕ್ಕಾದರೂ ತಾನು ಮಾತೆಯವರನ್ನು ಅತ್ಯಂತ ಸಹಜವಾಗಿ ಸಮೀಪಿಸಬಲ್ಲೆ ಎಂದುಕೊಳ್ಳುತ್ತಿದ್ದ. ಆತನ ಈ ಮನೋಭಾವವನ್ನು ತಿಳಿದ ಸ್ವಾಮಿ ಶುದ್ಧಾನಂದರು ಒಮ್ಮೆ ಅವನಿಗೆ, ಶ್ರೀಮಾತೆಯವರಲ್ಲಿ ಮುಕ್ತಿಗಾಗಿ ಪ್ರಾರ್ಥಿಸಬಲ್ಲೆಯಾ ಎಂದು ಸವಾಲೊಡ್ಡಿದರು. ಅದೇನು ಮಹಾಕಾರ್ಯವೆಂದು ಚಂದ್ರಮೋಹನ ಮಾತೆಯವರ ಬಳಿಗೆ ಹೋಗುತ್ತಾನೆ. ಪೂಜಾಗೃಹದಲ್ಲಿ ಕುಳಿತಿದ್ದ ಮಾತೆಯವರು ಒಂದು ಬಗೆಯ ದಿವ್ಯಭಾವದಲ್ಲಿದ್ದರು, ಸನ್ನೆಮಾಡಿ ಅವನಿಗೆ ಏನು ಬೇಕೆಂದು ಕೇಳಿದರು. ಶ್ರೀಮಾತೆಯವರ ಭವ್ಯವಾದ ವ್ಯಕ್ತಿತ್ವದ ಮುಂದೆ ಚಂದ್ರಮೋಹನನಿಗೆ ಮಾತೇ ಹೊರಡಲಿಲ್ಲ; ಕೇವಲ ಯಂತ್ರಚಾಲಿತನಂತೆ ಅಭ್ಯಾಸಬಲದಿಂದ ಪ್ರಸಾದವನ್ನು ಪ್ರಾರ್ಥಿಸಿ, ಅದನ್ನೇ ಪಡೆದು ಹಿಂದಿರುಗಿದ.

### ಆಬ್ರಹ್ಮಕೀಟಜನನಿ

ಶ್ರೀಮಾತೆಯವರು ಮಾತೃತ್ವದ ಇನ್ನೊಂದು ರೂಪದಲ್ಲಿ 'ಆಬ್ರಹ್ಮಕೀಟಜನನಿ'ಯಂತೆ ತೋರುತ್ತಾರೆ. ಲಲಿತಾಸಹಸ್ರನಾಮದಲ್ಲಿ ಜಗಜ್ಜನನಿ ದೇವಿಯನ್ನು 'ಆಬ್ರಹ್ಮಕೀಟಜನನಿ' ಎಂದು ಕರೆಯಲಾಗಿದೆ. ಆದಿಶಕ್ತಿ ಜಗನ್ಮಾತೆ ಹೇಗೆ ಸೃಷ್ಟಿಕರ್ತ ಬ್ರಹ್ಮನ ಜನನಿಯೋ, ಕ್ಷುದ್ರಾತಿಕ್ಷುದ್ರ ಕೀಟಕ್ಕೂ ಆಕೆಯೇ ಜನನಿ. ಈ ಬಗೆಗಿನ

ಕೆಲವು ಘಟನೆಗಳನ್ನು ನೋಡೋಣ. ಅಮ್ಜದ್ ಶ್ರೀಮಾತೆಯವರ ಭಕ್ತ. ಜಾತಿಯಲ್ಲಿ ಮುಸಲ್ಮಾನ, ವೃತ್ತಿಯಲ್ಲಿ ಕಳ್ಳ. ಶ್ರೀಮಾತೆಯವರ ಮನೆ ನಿರ್ಮಾಣದ ಕಾರ್ಯದಲ್ಲಿ ಕೂಲಿಕೆಲಸ ಮಾಡುತ್ತಿದ್ದನು. ಒಂದು ದಿನ ಆತ ಶ್ರೀಮಾತೆಯವರನ್ನು ನೋಡಲು ಬಂದಿದ್ದಾನೆ. ಶ್ರೀಮಾತೆಯು ನಳಿನಿಯನ್ನು ಕರೆದು, ಅವನಿಗೆ ಊಟಕ್ಕೆ ಬಡಿಸಲು ಹೇಳಿದರು. ತನ್ನ ಮಡಿಗೆ ಚ್ಯುತಿ ಬರುವುದೆಂದು ಹೆದರಿದ ನಳಿನಿ ಮುಸ್ಲಿಂನಾದ ಆತನಿಗೆ ದೂರದಿಂದಲೇ ಎಸೆದು ಎಸೆದು ಬಡಿಸುತ್ತಿದ್ದಳು. ಅದನ್ನು ಕಂಡು ಶ್ರೀಮಾತೆಯವರಿಗೆ ದುಃಖವಾಯಿತು. ಅಶ್ರದ್ಧೆಯಿಂದ ಬಡಿಸುವುದು ಸರಿಯಲ್ಲವೆಂದು ಹೇಳಿ, ತಾವೇ ಅಮ್ಜದನಿಗೆ ಪ್ರೀತಿ ಆದರಗಳಿಂದ ಉಣಬಡಿಸಿದರು. ಆತನ ಊಟವಾದ ನಂತರ ಆ ಜಾಗವನ್ನು ಅವರೇ ಸ್ವಚ್ಛಮಾಡಿದರು. ಇದನ್ನು ಕಂಡ ನಳಿನಿಯಂತೂ ಅತ್ತೆಯ ಜಾತಿ ಹೋಯಿತೆಂದು ಕೂಗಾಡತೊಡಗಿದಳು. ಇದನ್ನು ಕೇಳಿದ ಶ್ರೀಮಾತೆಯವರು, "ಇದೇನು ನೀನು ಹೇಳುತ್ತಿರುವುದು? ಶರತ್ ಹೇಗೆ ನನ್ನ ಮಗನೋ ಹಾಗೆಯೇ ಅಮ್ಜದನೂ ನನ್ನ ಮಗನೇ" ಎಂದು ಹೇಳಿದರು. ರಾಮಕೃಷ್ಣ ಮಹಾಸಂಘದ ಆಧಾರಸ್ತಂಭದಂತಿದ್ದ ಸಂತವರೇಣ್ಯರು ಶರತ್ ಮಹಾರಾಜರೆನಿಸಿದ ಸ್ವಾಮಿ ಶಾರದಾನಂದರು. ಹಳ್ಳಿಯಲ್ಲಿದ್ದ ಕಳ್ಳ ವೃತ್ತಿಯ ಸಾಮಾನ್ಯ ವ್ಯಕ್ತಿ ಅಮ್ಜದ್. ಈ ಇಬ್ಬರ ವ್ಯಕ್ತಿತ್ವದ ನಡುವಿನ ವ್ಯತ್ಯಾಸ ಅಜಗಜಾಂತರ. ಆದರೂ ಈ 'ಆಬ್ರಹ್ಮ ಕೀಟಜನನಿ'ಯ ಮಾತೃಪ್ರೇಮದಲ್ಲಿ ಇಬ್ಬರೂ ಸಮಾನರೇ ಆಗಿದ್ದರು.

ಇನ್ನೊಂದು ಘಟನೆ ಗೋವಿಂದನದು. ಇವನು ಜಯರಾಂಬಾಟಿಯಲ್ಲಿ ಶ್ರೀಮಾತೆಯವರ ಮನೆಯಲ್ಲಿ ಹಸುಗಳನ್ನು ನೋಡಿಕೊಳ್ಳುತ್ತಿದ್ದನು. ಒಮ್ಮೆ ಅವನ ಮೈಯಲ್ಲೆಲ್ಲಾ ಕಜ್ಜಿಯಾಗಿ ತುಂಬಾ ತುರಿಕೆಯಾಗುತ್ತಿತ್ತು. ಪಾಪ, ಹುಡುಗನು ಒಂದೇ ಸಮ ಕಷ್ಟ ಸಹಿಸಲಾರದೇ ರಾತ್ರಿಯೆಲ್ಲಾ ಅಳುತ್ತಿದ್ದನು. ಹುಡುಗನ ಈ ಕಷ್ಟ ಶ್ರೀಮಾತೆಯವರಿಗೆ ತಿಳಿದುಬಂತು. ಮರುದಿನ ಬೆಳಗ್ಗೆ ಅರಿಶಿನ ಹಾಗೂ ಬೇವಿನಸೊಪ್ಪು ಇತ್ಯಾದಿಗಳನ್ನು ಅರೆದು, ತಾವೇ ಒಂದು ಮನೆ ಔಷಧಿಯನ್ನು ತಯಾರಿಸಿ, ಗೋವಿಂದನಿಗೆ ಕೊಟ್ಟು, ಅದನ್ನು ಹೇಗೆ ಹಚ್ಚಬೇಕೆಂದು ಹೇಳಿಕೊಟ್ಟರು. ಮಾತೆಯವರ ಈ ಔಷಧಿಯಿಂದ ಅವನ ರೋಗ ಕ್ರಮೇಣ ವಾಸಿಯಾಯಿತು. ಅವನ ಕಷ್ಟವೂ ದೂರವಾಯಿತು. ಆಗ ಇವರಿಬ್ಬರಲ್ಲೂ ಉಂಟಾದ ಆನಂದವನ್ನು ಕಂಡು ಇತರರಿಗೆ ಅನ್ನಿಸುತ್ತಿತ್ತು, "ಮಾತೆಯವರು ನಿಜವಾಗಿಯೂ ಗೋವಿಂದನ ತಾಯಿಯೇ" ಎಂದು. ಮಾತೆಯವರ ಮಾತೃಪ್ರೇಮ ಮನುಷ್ಯಜಾತಿಗಷ್ಟೇ ಸೀಮಿತವಾಗಿರಲಿಲ್ಲ. ಅವರ ಮನೆಯಲ್ಲಿದ್ದ ಸಾಕುಗಿಣಿ ಗಂಗಾರಾಮ್, ಹಸಿವಾದಾಗಲೆಲ್ಲಾ 'ಅಮ್ಮಾ ಅಮ್ಮಾ' ಎಂದು ಕರೆಯುತ್ತಿತ್ತು. ಗಿಳಿ 'ಅಮ್ಮಾ' ಎಂದು ಕರೆದಾಗ ಮಾತೆಯವರು, 'ಬಂದೆಯಪ್ಪಾ ತಾಳು' ಎನ್ನುತ್ತಾ, ಅದಕ್ಕೆ ತಿನ್ನಲು ಏನಾದರೂ ಕೊಡುತ್ತಿದ್ದರು. ಇನ್ನೊಮ್ಮೆ ಎಳೆಕರುವೊಂದು ಯಾವುದೋ ಕಾರಣಕ್ಕಾಗಿ ಬಾರಿಬಾರಿಗೂ 'ಅಂಬಾ' ಎಂದು ಕರೆಯುತ್ತಿತ್ತು. ಮಾತೆಯವರ ಮಾತೃಹೃದಯ ಆ ಕರುವಿನ ಕರೆಗೂ ಸ್ಪಂದಿಸಿತು. ಮಾತೆಯವರು ಆ ಕರುವಿನ ಹತ್ತಿರ ಹೋಗಿ, ಪ್ರೀತಿಯಿಂದ ಅದರ ಮೈಸವರಿದಾಗ ಅದು ಸುಮ್ಮನಾಯಿತು.

ರಾಧಿಯ ಒಂದು ಮುದ್ದಿನ ಬೆಕ್ಕನ್ನು ಬ್ರಹ್ಮಚಾರಿ ಜ್ಞಾನ ಮಹಾರಾಜರು ಆಗಾಗ ಹೊಡೆಯುತ್ತಿದ್ದರು. ಆದರೂ ಶ್ರೀಮಾತೆಯವರ ಮತ್ತು ರಾಧಿಯ ಅಕ್ಕರೆಯಿಂದ ಈ ಬೆಕ್ಕಿನ ವಂಶ ವೃದ್ಧಿಯಾಗಿತ್ತು. ಒಮ್ಮೆ ಶ್ರೀಮಾತೆಯವರು ಜಯರಾಂಬಾಟಿಯಿಂದ ಕೊಲ್ಕತಾಗೆ ಹೊರಡುತ್ತಿದ್ದಾರೆ. ಜ್ಞಾನ ಮಹಾರಾಜರನ್ನು ಕರೆದು, "ಜ್ಞಾನ್, ಪ್ರತಿದಿನ ಬೆಕ್ಕುಗಳಿಗೆ ಊಟ ಕೊಡು; ಇಲ್ಲದಿದ್ದರೆ ಆಹಾರಕ್ಕಾಗಿ ಮನೆಮನೆಗಳಿಗೆ ಹೋಗಿ, ಸುಮ್ಮನೆ ಎಲ್ಲರಿಂದ ಏಟು ತಿನ್ನುತ್ತವೆ" ಎಂದು ಹೇಳಿದರು. ಇದಕ್ಕೆ ಜ್ಞಾನ ಮಹಾರಾಜರು ಕೊಟ್ಟ ಉತ್ತರ ಆಶಾದಾಯಕವಾಗಿರಲಿಲ್ಲ. ಆಗ ಶ್ರೀಮಾತೆಯವರು, "ನೋಡು, ಈ ಬೆಕ್ಕುಗಳಲ್ಲಿಯೂ ನಾನೇ ಇರುವೆ, ಮರೆಯಬೇಡ" ಎಂದು ಹೇಳಿದಾಗ, ಬೆಕ್ಕಿನ ಹೊಡೆತವೇ ನಿಂತುಹೋಯಿತು. ಅಷ್ಟೇ ಅಲ್ಲ, ಆ ಬೆಕ್ಕುಗಳಿಗೆ ಪ್ರಿಯವಾದ ಆಹಾರವಾದ ಮೀನಿನ ತುಂಡುಗಳ ವ್ಯವಸ್ಥೆಯನ್ನೂ ಜ್ಞಾನ ಮಹಾರಾಜರು ಮಾಡಿದರು. ಆಶ್ಚರ್ಯವೆಂದರೆ ತಾವೇ ಸ್ವತಃ ಮೀನು ತಿನ್ನದಿದ್ದರೂ ಶ್ರೀಮಾತೆಯವರ ಮಾತಿನಂತೆ ಬೆಕ್ಕುಗಳಿಗೆ ಮೀನು ಕೊಡಲು ಅವರು ಹಿಂಜರಿಯಲಿಲ್ಲ.

ಹೀಗೆ ಮಾತೆಯವರ ಮಾತೃತ್ವದ ಪ್ರೀತಿಯು ಎಲ್ಲೆಡೆಯಲ್ಲಿಯೂ ಸಮಾನವಾಗಿ ಹರಿಯುತ್ತಿತ್ತು. ಮಾತೃತ್ವದ ಎರಡು ಮುಖಗಳು – **ವೈಶಾಲ್ಯತೆ** ಮತ್ತು **ಅಗಾಧತೆ**. ಇವೆರಡರ ಪೂರ್ಣತೆಯು ಶ್ರೀಮಾತೆಯವರ ಮಾತೃತ್ವದಲ್ಲಿ ಹೇಗೆ ಪ್ರಕಟಗೊಂಡಿದೆ ಎನ್ನುವುದನ್ನು ನೋಡಿದೆವು. ಅವರ ಮಾತೃಪ್ರೇಮವು ಗಗನದಂತೆ ವಿಶಾಲವೂ, ಸಾಗರದಂತೆ ಆಳವೂ ಆಗಿದ್ದು ಸರ್ವವ್ಯಾಪಿಯಾದುದು. ಸನಾತನ ಭಾರತದ ಆದರ್ಶನಾರಿಯ ಸದ್ಗುಣಗಳ ಸಮಷ್ಟಿಯನ್ನೇ ಹೀಗೆ ಶ್ರೀಮಾತೆಯವರ ಜೀವನದಲ್ಲಿ ನಾವು ಕಾಣಬಹುದು. (ಮುಂದುವರಿಯುವುದು)